**Online Newspaper Clipping Service**

ವಿಜಯ ಕರ್ನಾಟಕ

**Dtd- Saturday, 22nd, February- 2020**



### ಡಿಸಿಸಿ ಬ್ಯಾಂಕ್, ದೇವರಾಜ ಅರಸು ಎಜುಕೇಷನ್ ಟ್ರಸ್ಟ್ ಸೇರಿ ಹಲವರು ತೆರಿಗೆ ಕಟ್ಟಿಲ್ಲ!

# ನಗರಸಭೆಗೆ ಕೋಟ್ಯಂತರ ತೆರಿಗೆ ಬಾಕಿ!

ವೆಂ.ಸುನೀಲ್ ಕುಮಾರ್ ಕೋಲಾರ
sunilkumarpapuu@gmail.com

ಕೋಲಾರ, ಚಿಕ್ಕಬಳ್ಳಾಪುರ ಎರಡು ಜಿಲ್ಲೆಯ ಜನರಿಗೆ ಕೋಟ್ಯಂತರ ರೂ. ಸಾಲ ಸೌಲಭ್ಯ ಒದಗಿಸುವ ಡಿಸಿಸಿ ಬ್ಯಾಂಕ್, ದೇವರಾಜ ಅರಸು ಎಜುಕೇಷನಲ್ ಟ್ರಸ್ಟ್ ಸೇರಿದಂತೆ ಹಲವು ಪ್ರತಿಷ್ಠಿತರು ನಗರಸಭೆಗೆ ಕೋಟ್ಯಂತರ ರೂ. ತೆರಿಗೆ ಬಾಕಿ ಉಳಿಸಿಕೊಂಡು ಸುದ್ದಿಯಾಗಿರುವ ವಿಷಯ ಬೆಳಕಿಗೆ ಬಂದಿದೆ.

ಹತ್ತಾರು ವರ್ಷಗಳಿಂದ ನಗರಸಭೆಯಿಂದ ಹತ್ತಾರು ಆಸ್ತಿಗಳು ಪಾಲಿಕೆಗೆ ತೆರಿಗೆ ಬಾಕಿ ಉಳಿಸಿಕೊಂಡಿವೆ. ತೆರಿಗೆ ಪಾವತಿಸುವಂತೆ ನೋಟಿಸ್ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ, ನಿರಂತರವಾಗಿ ನೋಟಿಸ್ ಜಾರಿಗೊಳಿಸಿದ ರಿಂದ ಕೆಲವರು ಒಟ್ಟು ತೆರಿಗೆಯ ಶೇ.10-20 ರಷ್ಟು ಪಾವತಿಸಿದ್ದರೆ, ಇನ್ನು ಕೆಲವರು ಒಮ್ಮೆಯೂ ತೆರಿಗೆ ಪಾವತಿಸಿಲ್ಲ.

ತೆರಿಗೆದಾರರಿಂದ ಸಮರ್ಪಕವಾಗಿ ತೆರಿಗೆ ಸಂಗ್ರಹವಾಗದ ಹಿನ್ನೆಲೆಯಲ್ಲಿ ನಗರಸಭೆ ಆರ್ಥಿಕವಾಗಿ ಹಿನ್ನಡೆ ಅನುಭವಿಸುವಂತಾಗಿದ್ದು, ಕಾಮಗಾರಿಗೂ ಜಿಲ್ಲಾಡಳಿತವನ್ನು ಅವಲಂಬಿಸುವಂತಹ ಸ್ಥಿತಿಗೆ ನಗರಸಭೆ ತಲುಪಿದೆ. ಪ್ರಸ್ತುತ ನಗರದಲ್ಲಿ 30ಕ್ಕೂ ಹೆಚ್ಚಿನ ಆಸ್ತಿದಾರರು, 10ಲಕ್ಷಕ್ಕೂ ಹೆಚ್ಚಿನ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಇದರಿಂದಾಗಿ ನಗರಸಭೆಯ ಸ್ವಂತ ಅನುದಾನದಲ್ಲಿ ಯಾವುದೇ ಯೋಜನೆ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ನಗರಸಭೆ ಅಧಿಕಾರಿಗಳು ಮಾಹಿತಿ ನೀಡಿದರು.

**ಬೃಹತ್ ತೆರಿಗೆ ಉಳಿಸಿದ ಟ್ರಸ್ಟ್:** ನಗರದ ಹೊರವಲಯದಲ್ಲಿರುವ ದೇವರಾಜ ಅರಸು ಎಜುಕೇಷನಲ್ ಟ್ರಸ್ಟ್ ಕೋಲಾರ ನಗರಸಭೆಗೆ 11 ಕೋಟಿ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿದ್ದು, ತೆರಿಗೆ ಪಾವತಿಸುವಂತೆ ನೋಟಿಸ್ ಜಾರಿಗೊಳಿಸಲಾಗಿದೆ. ಆದರೆ, ಇದುವರೆಗೆ ತೆರಿಗೆ ಪಾವತಿಗೆ ಮುಂದಾಗಿಲ್ಲ ಎಂದು ಅಧಿಕಾರಿಗಳು ಹೇಳಿದರು.

**ಜಿಲ್ಲೆ ಸಾಲ ನೀಡುವ ಡಿಸಿಸಿ ಬ್ಯಾಂಕ್ ನಗರಸಭೆಗೆ ಬಾಕಿದಾರ!:** ಎರಡು ಜಿಲ್ಲೆಗಳ ರೈತರು ಹಾಗೂ ಸ್ತ್ರೀಶಕ್ತಿ ಸಂಘಗಳಿಗೆ ಬಡ್ಡಿ ರಹಿತ ಸಾಲ ನೀಡುವ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಬ್ಯಾಂಕ್ ನಗರಸಭೆಗೆ 2002-03 ರಿಂದ ಬಾಕಿ ಉಳಿಸಿಕೊಂಡಿದೆ. ಪ್ರತಿ ವರ್ಷ ನೋಟಿಸ್ ನೀಡಿದರೂ ಬ್ಯಾಂಕ್ ಕಡೆಯಿಂದ ಇದುವರೆಗೆ ತೆರಿಗೆ ಪಾವತಿಯಾಗಿಲ್ಲ, ಸದ್ಯ ಅಸಲು ಬಡ್ಡಿ ಸೇರಿದಂತೆ ಡಿಸಿಸಿ ಬ್ಯಾಂಕ್ ನಗರಸಭೆಗೆ 10,79,801 ರೂ. ಪಾವತಿಸಬೇಕಿದೆ.

**ಟೋಟಲ್ ಸ್ಟೇಷನ್ ಸರ್ವೆ ಆಗಬೇಕಿದೆ:** ಕೋಲಾರ ನಗರಸಭೆ ವ್ಯಾಪ್ತಿಯಲ್ಲಿನ ತೆರಿಗೆದಾರರು 2002-03ರಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ(ಎಸ್ಎಎಸ್) ಅಡಿಯಲ್ಲಿ ಘೋಷಿಸಿಕೊಂಡಿದ್ದು, ಹೆಚ್ಚಿನವರು ತಪ್ಪು ಮಾಹಿತಿ ನೀಡಿರುವ ಸಾಧ್ಯತೆಯಿದ್ದು, ಈ ಹಿನ್ನೆಲೆಯಲ್ಲಿ ನಡೆಸಲಾದ ಟೋಟಲ್ ಸ್ಟೇಷನ್ ಸರ್ವೆ ಮಾದರಿಯಲ್ಲಿ ಆಸ್ತಿಗಳ ಮರು ಸರ್ವೆ ನಡೆಸಬೇಕಿದೆ.

ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡವರ ವಿವರ ತೆರಿಗೆದಾರರ ಹೆಸರು ಬಾಕಿ ಉಳಿಸಿಕೊಂಡ ಹಣ ದೇವರಾಜ ಅರಸು ಎಜುಕೇಷನಲ್ ಟ್ರಸ್ಟ್ 11,02,23,040 ಮುಬಾರಕ್ ಮರ್ಚೆಂಟ್ ಶಾಪಿಂಗ್ ಕಾಂಪ್ಲೆಕ್ಸ್, 99,74,753 ವೆಂಕಟೇಶ್ವರ ಕಲ್ಯಾಣ ಮಂಟಪ. 80,72,797 ಮೋರಿಯೊಂದರ ವಾಣಿಜ್ಯ ಮಳಿಗೆಗಳಿಂದ 412307 ಎ.ಎಂ. ಲಕ್ಷ್ಮೀನಾರಾಯಣ (ಟಿಂಬರ್ ಶಾಲೆ) 3,37,886, ಡಾ.ಶಾರದಮ್ಮ 2,30,156ರೂ ಬಾಕಿ ಇರಿಸಿಕೊಂಡಿದ್ದಾರೆ.




**ಜಿಲ್ಲೆ ಸಾಲ ನೀಡುವ ಡಿಸಿಸಿ ಬ್ಯಾಂಕ್ ನಗರಸಭೆಗೆ ಬಾಕಿದಾರ!**

ಎರಡು ಜಿಲ್ಲೆಗಳ ರೈತರು ಹಾಗೂ ಸ್ತ್ರೀಶಕ್ತಿ ಸಂಘಗಳಿಗೆ ಬಡ್ಡಿ ರಹಿತ ಸಾಲ ನೀಡುವ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಬ್ಯಾಂಕ್ ನಗರಸಭೆಗೆ 2002-03 ರಿಂದ ಬಾಕಿ ಉಳಿಸಿಕೊಂಡಿದೆ. ಪ್ರತಿ ವರ್ಷ ನೋಟಿಸ್ ನೀಡಿದರೂ ಬ್ಯಾಂಕ್ ಕಡೆಯಿಂದ ಇದುವರೆಗೆ ತೆರಿಗೆ ಪಾವತಿಯಾಗಿಲ್ಲ, ಸದ್ಯ ಅಸಲು ಬಡ್ಡಿ ಸೇರಿದಂತೆ ಡಿಸಿಸಿ ಬ್ಯಾಂಕ್ ನಗರಸಭೆಗೆ 10,79,801 ರೂ. ಪಾವತಿಸಬೇಕಿದೆ.

ನಗರದಲ್ಲಿರುವ ಬಹುತೇಕ ಪ್ರತಿಷ್ಠಿತರು ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಇದರಿಂದ ನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ, ಡಿಸಿಸಿ ಬ್ಯಾಂಕ್‌ನವರು ಸಾಲ ಪಡೆದವರು ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿಸಿ ಎಂದು ಹೇಳುತ್ತಾರೆ. ಆದರೆ ಅವರೇ ಹಲವು ವರ್ಷಗಳಿಂದ ತೆರಿಗೆ ಉಳಿಸಿಕೊಂಡಿದ್ದಾರೆ.
**-ಶ್ರೀಕಾಂತ್**, ಪೌರಾಯುಕ್ತ, ಕೋಲಾರ

ನಗರಸಭೆಗೆ ತೆರಿಗೆ ಬಾಕಿ ಇರುವ ಸಂಬಂಧ ಅನೇಕ ವರ್ಷಗಳಿಂದ ಮಾಹಿತಿ ನೀಡಿಲ್ಲ, ಇದೀಗ ನೋಟಿಸ್ ನೀಡಿದ್ದಾರೆ. ಪಾವತಿಸಲು ನಾವು ಸಿದ್ಧರಿದ್ದೇವೆ. ಆದರೆ, ನಮ್ಮ ಬ್ಯಾಂಕ್ ಮುಂದಿನ ರಸ್ತೆ ಸಾಕಷ್ಟು ಹಾಳಾಗಿದೆ, ಬ್ಯಾಂಕ್‌ನಲ್ಲಿ ನೀರಿನ ವ್ಯವಸ್ಥೆ ಇಲ್ಲ, ಯಾವುದೇ ಸೌಕರ್ಯ ಕಲ್ಪಿಸದೆ ತೆರಿಗೆ ಕೇಳುವುದು ಸರಿಯಲ್ಲ, ಮೊದಲು ಸೌಕರ್ಯಗಳನ್ನು ಕಲ್ಪಿಸಲಿ, ನಾವು ತಕ್ಷಣವೇ ಪಾವತಿ ಮಾಡುತ್ತೇವೆ. ಈ ಸಂಬಂಧ ನಗರಸಭೆ ಆಯುಕ್ತರಿಗೆ ನಮ್ಮ ವ್ಯವಸ್ಥಾಪಕ ನಿರ್ದೇಶಕರು ಪತ್ರಮುಖೇನ ತಿಳಿಸಿದ್ದಾರೆ.
**-ಬ್ಯಾಲಹಳ್ಳಿ ಗೋವಿಂದಗೌಡ,**
ಡಿಸಿಸಿ ಬ್ಯಾಂಕ್ ಅಧ್ಯಕ್ಷ